ಹುದ್ದೆಯನ್ನೇ ನಂಬಿಕೊಂಡು ಬಂದಿರುವುದರಿಂದ ಈಗ ಅವರಿಗೆ ಯಾವ ಮಾರ್ಗದಲ್ಲಿಯೂ ಜೀವನ ಸಾಗಿಸುವುದು ಕಷ್ಟವಾಗಿ ಕಂಡು ಬರುತ್ತದೆ, ಮೇಲ್ಕಂಡವರಿಗೆ ಈಗಾಗಲೇ ವಯೋಮಿತಿ ಕಾಲ ಬಂದಿದೆ. ಅವರುಗಳು ತರಬೇತಿ ಹೊಂದಿ ೧೦-೧೨ ವರ್ಷಗಳಾಗಿವೆ. ಆದ್ದರಿಂದ ಅವರಂಗಳಿಗೆ ದಯವಾಡಿ ಸರಕಾರದ ಈ ನೀತಿಯನ್ನು ಪ್ರತಿಭಟಿಸುತ್ತಾ ಅವರಿಗೆ ಆಗಿರು ತೊಂದರೆ ಮತ್ತು ಜೀವನ ಮಾರ್ಗಕ್ಕೆ ವ್ಯತಿಯನ್ನು ಕಲ್ಪಿಸಿಕೊಡಬೇಕೆಂದು ಕೋರುತ್ತೇನೆ. ಈ ಮೊದಲೇ ಜನತಾ ಸರಕಾರ ಕುಟುಂಬವೊಂದಕ್ಕೆ ಉದ್ಯೋಗ ಕೊಡುತ್ತೇವೆಂದು ಘೋಷಿಸಿರುತ್ತದೆ. ಆದ್ದರಿಂದ ಈಗ ಆಗಿರುವ ಅನ್ಯಾಯವನ್ನು ಸರಿಪಡಿಸಿ ಸರಕಾರದ ಆಜ್ಞೆಯನ್ನು ಬದಲಾಯಿಸಿ ಮೊದಲು ವಯೋಮಿತಿ ದಾಟುವವರಿಗೆ ಅನುಕೂಲವಾಗುವಂತೆ ಮಾಡಿಕೊಡಬೇಕೆಂದು ಮನವಿ ಮಾಡಿ ಕೊಳ್ಳುತ್ತೇನೆ.

ಶ್ರೀ ಜೀವರಾಜ್ ಆಳ್ವ.—ಮಾನ್ಯ ಸದಸ್ಯರ ಸಲಹೆಯನ್ನು ಸರಕಾರ ಪರಿಶೀಲನೆ ಮಾಡುತ್ತದೆ.

೧೨) ಬೋಗಸ್ ರೇಷನ್ ಕಾರ್ಡುಗಳನ್ನು ಪತ್ತೆ ಹಚ್ಚಲು ಕ್ರಮ

ಶ್ರೀಮತಿ ಸುಮಾ ವಸಂತ.—ಮಾನ್ಯ ಅಧ್ಯಕ್ಷರೇ, ಇತ್ತೀಚೆಗೆ ಸರಕಾರದವರು ಬೋಗಸ್ ರೇಷನ ಕಾರ್ಡುಗಳನ್ನು ಪತ್ತೆ ಹಚ್ಚಲು ಕ್ರಮ ಕೈಗೊಂಡಿರುವುದು ಸ್ವಾಗತಾರ್ಹ. ಈ ರೀತಿ ಕೈಗೊಂಡ ಕ್ರಮ ದಿಂದಾಗಿ ಯಾವ ಯಾವ ಜಿಲ್ಲೆಯಿಂದ ಎಷ್ಟೆಷ್ಟು ಬೋಗಸ್ ರೇಷನ್ ಕಾರ್ಡುಗಳು ಪತ್ತೆಯಾಗಿವೆ ಹಾಗೂ ಈ ರೀತಿ ಬೋಗಸ್ ರೇಷನ್ ಕಾರ್ಡು ಹೊಂದಿದ್ದವರ ಮೇಲೆ ಸರಕಾರ ಯಾವ ಕ್ರಮ ಕೈಗೊಳ್ಳಲು ಯೋಚಿಸಿದೆ ? ಇನ್ನೂ ಉಳಿದಿರಬಹುದಾದ ಬೋಗಸ್ ರೇಷನ್ ಕಾರ್ಡುಗಳ ಪತ್ತೆಗೆ ಯಾವ ಕ್ರಮ ಕೈಗೊಳ್ಳಲಾಗುವುದು? ಈಗಾಗಲೇ ಪತ್ತೆಯಾಗಿರುವ ಬೋಗಸ್ ಕಾರ್ಡುಗಳಲ್ಲಿ ರೇಷನ್ ಅಂಗಡಿಯವರೇ ಇಟ್ಟುಕೊಂಡಿದ್ದಂತಹ ಬೋಗಸ್ ರೇಷನ್ ಕಾರ್ಡುಗಳು ಸೇರಿವೆಯೇ ? ಇಲ್ಲದಿದ್ದಲ್ಲಿ, ಇಂತಹ ಕಾರ್ಡುಗಳನ್ನು ಪತ್ತೆಹಚ್ಚಲು ಯಾವ ಕ್ರಮಕೈಗೊಳ್ಳಲಾಗುವುದು ? ರಾಜ್ಯದ ಎಲ್ಲಾ ಭಾಗದಲ್ಲಾ ರೇಷನ್ ಕಾರ್ಡುಗಳಿಗೆ ಫೋಟೋ ಹಚ್ಚಲು ಸರಕಾರದವರು ತೀರ್ಮಾನಿಸಿರುವರೆ ? ಹಾಗಿದ್ದಲ್ಲಿ ಈ ಬಗ್ಗೆ ಕೈಕೊಂಡ ಕ್ರಮವೇನು ? ಈ ಎಲ್ಲ ವಿಷಯಗಳ ಬಗ್ಗೆ ಸದನಕ್ಕೆ ಸಂಪೂರ್ಣ ಮಾಹಿತಿಗಳನ್ನೊಳಗೊಂಡ ಹೇಳಿಕೆಯನ್ನು ನೀಡಬೇಕಾಗಿ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಬಸವರಾಜ್ ಪಾಟೀಲ್ ಅನ್ವರಿ (ಆಹಾರ ಮತ್ತು ನಾಗರೀಕ ಸರಬರಾಜು ಖಾತೆ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀಮತಿ ಸುಮಾ ವಸಂತ ಅವರು ನಿಯಮ ೩೩ರಲ್ಲಿ ಪ್ರಸ್ತಾಪಿಸಿರುವ ವಿಚಾರಕ್ಕೆ ಈ ಕೆಳಕಂಡ ಲಿಖಿತ ಹೇಳಿಕೆಯನ್ನು ನೀಡಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ರಾಜ್ಯದಲ್ಲಿ ಒಟ್ಟು ೬೦,೧೫೨ ಬೋಗಸ್ ಕಾರ್ಡುಗಳನ್ನು ಪತ್ತೆ ಹಚ್ಚಿದ್ದು, ಅವುಗಳ ವಿವರ ಕೆಳಕಂಡಂತೆ ಇದೆ.

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಪತ್ತೆ ಹಚ್ಚಿದ ಬೋಗಸ್ ಪಡಿತರ ಚೀಟಿಗಳು
೧	ಬೆಂಗಳೂರು (ಅನೌಪಚಾರಿಕ ಪಡಿತರ)	೧೪೨೧೯
೨	ಬೆಂಗಳೂರು ನಗರ ಜಿಲ್ಲೆ	೪೯
೩	ಬೆಂಗಳೂರು ಗ್ರಾಮಾಂತರ ಜಿಲ್ಲೆ	೪೩
೪	ಬೆಳಗಾಂ	೧೬೮೨೬
೫	ಬೀದರ್	೩
೬	ಬಳ್ಳಾರಿ	೨೦೦೦
೭	ಬಿಜಾಪುರ	—
೮	ಚಿಕ್ಕಮಗಳೂರು	೫೦
೯	ಚಿತ್ರದುರ್ಗ	೯೩೬೩
೧೦	ದಕ್ಷಿಣ ಕನ್ನಡ	—
೧೧	ಧಾರವಾಡ	—
೧೨	ಗುಲ್ಬರ್ಗ	೧೨೬
೧೩	ಹಾಸನ	೨೮೦
೧೪	ಕೊಡಗು	೩೦೧೫
೧೫	ಕೋಲಾರ	೩೦೦೦
೧೬	ಮಂಡ್ಯ	—
೧೭	ಮೈಸೂರು	೨೦೨೩
೧೮	ರಾಯಚೂರು	—
೧೯	ಶಿವಮೊಗ್ಗ	೨೧೩೧
೨೦	ತುಮಕೂರು	೩೧೫೪
೨೧	ಉತ್ತರ ಕನ್ನಡ	೩೫೦
	ಒಟ್ಟು	೬೦೧೫೨

ಬೋಗಸ್ ಕಾರ್ಡುಗಳನ್ನು ವ್ಯಕ್ತಿಗಳು ಹೊಂದಿದ್ದ ಪಕ್ಷದಲ್ಲಿ, ಕಾರ್ಡುಗಳನ್ನು ರದ್ದುಪಡಿಸುವ ಕ್ರಮ ಕೈಗೊಳ್ಳಲಾಗುವುದು. ರೇಷನ್ ಡಿಪೋಗಳು, ಬೋಗಸ್ ಕಾರ್ಡುಗಳನ್ನು ಹೊಂದಿದ್ದಲ್ಲಿ ಅಂತಹವರ ಡಿಪೋಗಳನ್ನು ಅಪರಾಧದ ತೀವ್ರತೆಗೆ ಅನುಗುಣವಾಗಿ ರದ್ದುಪಡಿಸುವ ಅಥವಾ ದಂಡ ವಿಧಿಸುವ ಕಾರ್ಯವನ್ನು ಕೈಗೊಳ್ಳಲಾಗುವುದು. ಮೇಲೆ ತಿಳಿಸಿರುವ ಪತ್ತೆ ಹಚ್ಚಿರುವ ಬೋಗಸ್ ಕಾರ್ಡುಗಳಲ್ಲಿ ನ್ಯಾಯಬೆಲೆ ಅಂಗಡಿಗಳ ಮಾಲೀಕರ ಹತ್ತಿರವಿದ್ದ ಬೋಗಸ್ ಕಾರ್ಡುಗಳೂ ಸೇರಿವೆ. ಇನ್ನೂ ಇರಬಹುದಾದ ಬೋಗಸ್ ಕಾರ್ಡುಗಳನ್ನು ಪತ್ತೆ ಹಚ್ಚಲು ಕಾಟಾಚಾರ ಮುಖ್ಯಸ್ಥನೇ ನ್ಯಾಯಬೆಲೆ ಅಂಗಡಿಗೆ ಬಂದು ಅಸೈನ್‌ಮೆಂಟ್ ಪುಸ್ತಕದಲ್ಲಿ ಸಹಿಮಾಡುವ ವ್ಯವಸ್ಥೆ ಮಾಡಲಾಗಿದೆ. ರೇಷನ್

ಕಾರ್ಡಿಗೆ ಫೋಟೋ ಹಚ್ಚಿಸಲು ಸಹ ತೀರ್ಮಾನಿಸಲಾಗಿದೆ. ಹಾಗೂ ಇದನ್ನು ಅನುಷ್ಠಾನಗೊಳಿಸಲು ಹೊಸ ಪಡಿತರ ಚೀಟಿಯನ್ನು ಮುದ್ರಿಸಿ ವಿತರಿಸುವ ಸಮಯದಲ್ಲಿ ಫೋಟೋ ಹಚ್ಚುವಂತೆ ವ್ಯವಸ್ಥೆ ಮಾಡಲಾಗುತ್ತಿದೆ.

೧೩) ಬಂಟವಾಳ ತಾಲ್ಲೂಕಿನ ವಾಮದ ಪದವು ಸರಕಾರಿ ಕಿರಿಯ ಕಾಲೇಜಿನಲ್ಲಿ ಶಿಕ್ಷಕರ ಕೊರತೆ ಇದ್ದು ಖಾಲಿ ಸ್ಥಾನಗಳನ್ನು ಭರ್ತಿ ಮಾಡಲು ಒತ್ತಾಯ.

ಶ್ರೀ ರಮಾನಾಥ ರೈ (ಬಂಟ್ವಾಳ).—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಬಂಟವಾಳ ತಾಲ್ಲೂಕಿನ ವಾಮದ ಪದವು ಸರಕಾರಿ ಕಿರಿಯ ಕಾಲೇಜಿನ ಪ್ರೌಢ ಶಾಲಾ ವಿಭಾಗದಲ್ಲಿ ಶಿಕ್ಷಕರ ಭಾರೀ ಕೊರತೆ ಇದೆ. ವಿಜ್ಞಾನ ವಿಭಾಗದಲ್ಲಿ ಎರಡು, ಕಲಾ ವಿಭಾಗದಲ್ಲಿ ಎರಡು, ಇಂಗ್ಲೀಷ್ ವಿಭಾಗದಲ್ಲಿ ಒಂದು, ದೈಹಿಕ ಶಿಕ್ಷಣ ವಿಭಾಗದಲ್ಲಿ ಒಂದು ವಂತಿಕ್ಕ ವೃತ್ತಿ ಶಿಕ್ಷಣ ವಿಭಾಗದಲ್ಲಿ ಒಂದು ಹೀಗೆ ಒಟ್ಟು ಏಳುಶಿಕ್ಷಕರ ಕೊರತೆ ಇದೆ. ಇದರಿಂದಾಗಿ ಆ ಪ್ರೌಢ ಶಾಲೆಯಲ್ಲಿ ಓದುವ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆ ಆಗಿದೆ. ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ತೊಂದರೆಯಾಗದಂತೆ ಶಿಕ್ಷಣ ಸಚಿವರು ಖಾಲಿ ಇರುವ ಶಿಕ್ಷಕರ ಸ್ಥಾನಗಳನ್ನು ಭರ್ತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೀವರಾಜ ಆಳ್ವ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈಗಾಗಲೇ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಈ ಹುದ್ದೆಗಳನ್ನು ಆದಷ್ಟು ಬೇಗನೆ ನೇಮಕ ಮಾಡಲಿಕ್ಕೆ ಸರ್ಕಾರ ಆಜ್ಞೆ ಮಾಡಿದೆ.

೧೪) ಸೇಡಂ ತಾಲ್ಲೂಕು ಜಾಕನಪಲ್ಲಿ ಗ್ರಾಮಕ್ಕೆ ನ್ಯಾಯಬೆಲೆ ಅಂಗಡಿಯಂ ಮೂಲಕ ದವಸಧಾನ್ಯಗಳ ಸಮರ್ಪಕ ವಿತರಣೆಗೆ ಒತ್ತಾಯ.

ಶ್ರೀ ಚಂದ್ರಶೇಖರ ರೆಡ್ಡಿ ದೇಶ್‌ಮುಖ್ ಮದನ.—ಮಾನ್ಯ ಅಧ್ಯಕ್ಷರೇ, ಸುಮಾರು ಎರಡು ಮೂರು ತಿಂಗಳು ಸತತವಾಗಿ ನ್ಯಾಯಬೆಲೆ ಅಂಗಡಿ, ಜಾಕನಪಲ್ಲಿ ಗ್ರಾಮ, ಸೇಡಂ ತಾಲ್ಲೂಕು, ಇಲ್ಲಿ ಸರಿಯಾಗಿ ಕೆಲಸ ಮಾಡುತ್ತಿರುವುದಿಲ್ಲವಾಗಿ, ಸಾರ್ವಜನಿಕರಿಗೆ ಸಮಯಕ್ಕೆ ಸರಿಯಾಗಿ ದವಸಧಾನ್ಯಗಳು ದೊರೆಯದ ಕಾರಣ ಬಹಳ ತೊಂದರೆ ಉಂಟಾಗಿದೆ. ಮೇಲಿನ ಅಧಿಕಾರಿಗಳಿಗೆ ಅರ್ಜಿ ಕೊಟ್ಟರೂ ಏನು ಕ್ರಮ ಕೈಗೊಂಡಿರುವುದಿಲ್ಲ. ತಾಲ್ಲೂಕು ಪಂಚಾಯತಿ ಸಮಿತಿ ಕಾರ್ಯದರ್ಶಿಗಳು ಈಗಿರುವ ನ್ಯಾಯಬೆಲೆ ಅಂಗಡಿಯನ್ನು ಬದಲಾಯಿಸಿ ಆಜ್ಞೆ ನೀಡಿದ್ದಾಗ್ಯೂ, ಜಿಲ್ಲಾ ಪರಿಷತ್ ಕಾರ್ಯದರ್ಶಿಗಳು ಅದನ್ನು ತಡೆಹಿಡಿದಿದ್ದಾರೆಂದು ತಿಳಿದುಬಂದಿದೆ.

ಸದರಿ ಗ್ರಾಮದ ಜನರಿಗೆ ದವಸಧಾನ್ಯಗಳು ಸಮರ್ಪಕವಾಗಿ ಸರಬರಾಜು ಮಾಡಿಸಲು ಸೂಕ್ತ ವ್ಯವಸ್ಥೆ ಮಾಡಬೇಕೆಂದು ಕೋರಿಕೆ.

ಶ್ರೀ ಬಸವರಾಜ್ ಪಾಟೀಲ್ ಅನ್ವರಿ (ಆಹಾರ ಮತ್ತು ನಾಗರೀಕ ಸರಬರಾಜು ಖಾತೆ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ತಿಳಿಸಿರುವ ಸೇಡಂ ತಾಲ್ಲೂಕಿನ ಜಾಕನಪಲ್ಲಿ ಗ್ರಾಮದ ನ್ಯಾಯಬೆಲೆ ಅಂಗಡಿಯು ಸರಿಯಾಗಿ ಕೆಲಸ ಮಾಡದೆ ಸಾರ್ವಜನಿಕರಿಗೆ ಸಮಯಕ್ಕೆ ಸರಿಯಾಗಿ ದವಸ ಧಾನ್ಯಗಳನ್ನು ವಿತರಿಸದೆ ತೊಂದರೆಯನ್ನುಂಟು ಮಾಡುತ್ತಿದ್ದರೆ ಅದನ್ನು ಸರಿಪಡಿಸುವಂತೆ ಜಿಲ್ಲಾ ಪರಿಷತ್ತಿಗೆ ಸೂಚಿಸಲಾಗುವುದು. ಹಾಗೂ ತಪ್ಪಿತಸ್ಥರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಲು ಸೂಚಿಸಲಾಗುವುದು.

೧೫) ಪುತ್ತೂರು ತಾಲ್ಲೂಕಿನ ಕೊಡಿಂಬಳ ಗ್ರಾಮದ ಶಾಂತ್ಯಾಡಿಯ ವಿಜಯನ್ ಅವರಿಗೆ ಕದಾಯ ಅಧಿಕಾರಿಗಳಿಂದ ಉಂಟಾಗಿರುವ ಕಿರುಕುಳವನ್ನು ತಪ್ಪಿಸಲು ಒತ್ತಾಯ.

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೇ, ಸುಳ್ಯ ವಿಧಾನ ಸಭಾ ಕ್ಷೇತ್ರದ ಪುತ್ತೂರು ತಾಲ್ಲೂಕಿನ ಕೊಡಿಂಬಳ ಗ್ರಾಮದ ಶಾಂತ್ಯಾಡಿ ಎಂಬಲ್ಲಿ ಪಾಸ್ತವಿಸಿಕೊಂಡು ಶ್ರೀ ವಿಜಯನ್ ಎಂಬುವರು ಕಳೆದ